## 2022–23 ಸಾಲಿನ ಮಾದರಿ ಪ್ರಶ್ನೆ ಪತ್ರಿಕೆ – 5

**ವಿಷಯ : ಪ್ರಥಮ ಭಾಷೆ – ಕನ್ನಡ**

**ವಿಷಯ ಸಂಕೇತ : 01–K**

**ಅವಧಿ : 3 ಗಂಟೆ 15 ನಿಮಿಷ** **ಗರಿಷ್ಠ ಅಂಕಗಳು : 100**

**ಶಾಲಾ ಅಭ್ಯರ್ಥಿಗಳಿಗೆ**

---

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ. 1x6=6**

**1. ಕನ್ನಡ ವರ್ಣಮಾಲೆಯಲ್ಲಿನ ಹ್ರಸ್ವ ಸ್ವರಗಳ ಸಂಖ್ಯೆ :**

(ಎ) 13 (ಬಿ) 9
(ಸಿ) 34 (ಡಿ) 7

**2. ಪರಿಮಾಣವಾಚಕಕ್ಕೆ ಉದಾಹರಣೆ ;**

(ಎ) ಬಿಳುಪು (ಬಿ) ಅವು
(ಸಿ) ಇನಿತು (ಡಿ) ಎಳವ

**3. ದೇಶಿಯ ಪದ ;**

(ಎ) ರಸ್ತೆ (ಬಿ) ಚಿಲಕ
(ಸಿ) ಸೋಪು (ಡಿ) ಕಾಗದ

**4. ಸಪ್ತಮೀ ವಿಭಕ್ತಿಕಾರಕ ;**

(ಎ) ಸಂಪ್ರಧಾನ (ಬಿ) ಸಂಬಂಧ
(ಸಿ) ಅಪದಾನ (ಡಿ) ಅಧಿಕರಣ

**5. ಸಂಭವನಾರ್ಥಕ ಕ್ರಿಯಾ ರೂಪಕ್ಕೆ ಉದಾಹರಣೆ ;**

(ಎ) ಓದಿಯಾರು (ಬಿ) ಓದಲಿ
(ಸಿ) ಓದಿರಿ (ಡಿ) ಮಾಡರು

**6. ದ್ವಿರುಕ್ತಿಗೆ ಉದಾಹರಣೆ ;**

(ಎ) ಸರಸರ (ಬಿ) ತುತ್ತತುದಿ
(ಸಿ) ಹಾಲ್ಜೇನು (ಡಿ) ಧಗಧಗ

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. 4x1=4**

7. ವಾಗ್ದೇವಿ : ಜಶ್ತ್ವಸಂಧಿ : : ವಲ್ಕಲಾವೃತ : ____________

8. ಎಣ್ದೆಸೆ : ದ್ವಿಗು ಸಮಾಸ : : ನೆಯ್ದುವಸ್ತ್ರ : ____________

9. ಚಂದ್ರನಂತೆ : ತದ್ಧಿತಾಂತಾವ್ಯಯ : : ಜಾಣ್ಮೆ : ____________

10. ಕಾವಲ್ಗೆ : ಕಾವಲಿಗೆ : : ಪಸುರ್ಗೆ : ____________

**III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ 1x7=7**

11. ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?

12. ದರ್ಭೆಯ ಚಿಗುರು ಯಾವ ಗುಣವನ್ನು ಒರೆಸಿಬಿಡುತ್ತದೆ?

13. “ಕೈಗಾರಿಕೀಕರಣ ಇಲ್ಲವೆ ಅವನತಿ” ಎಂಬ ಘೋಷಣೆ ಮಾಡಿದರು ಯಾರು?

14. ಶಿವಾನುಭವ ಶಬ್ದಕೋಶ ಪುಸ್ತಕ ಬರೆದವರು ಯಾರು?
15. ನದೀಜಲಗಳು ಏನಾಗಿವೆ?
16. ದಿನಪಸುತ ಎಂದರೆ ಯಾರು?
17. ಪೆರಿಯಾರ್ ಅವರ ಬದುಕಿನ ಧ್ಯೇಯವೇನಾಗಿತ್ತು?

**IV.ಈ ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ** 10x2=20

18. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು?
19. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?
20. ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು?
21. ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು?
22. ಕೃಷ್ಣನು ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ (ಉ)ಭಯವನ್ನು ಬಿತ್ತಿದನು?
23. ಈ ನೆಲದೊಡನೆ ತಾನು ಸಹಬಾಳ್ವೆ ಮಾಡುವುದಿಲ್ಲವೆಂದು ದುರ್ಯೋಧನ ಹೇಳುವುದೇಕೆ?
24. ರಾಜಕೀಯ ಸ್ವಾತಂತ್ರ್ಯದ ಮಹತ್ವವೇನು?
25. 'ವಸಂತ ಮುಖ ತೋರಲಿಲ್ಲ' ಕವನದ ಆಶಯವೇನು ?
26. ಸ್ವಾತಂತ್ರ್ಯ ಹೋರಾಟಗಾರರು ಕ್ರಿ.ಶ. 1932ರಲ್ಲಿ ವಿನಂತಿಸಿದ್ದ ಪತ್ರದ ಸಾಲುಗಳಲ್ಲಿ ಯಾವ ಯಾವ ವಿದೇಶೀ ವಸ್ತುಗಳನ್ನು ಖರೀದಿಸಬಾರದೆಂದು ಉಲ್ಲೇಖಿಸಿದ್ದಾರೆ?
27. ಮಂಗಳೂರಿನಲ್ಲಿ ಮರಾಠಿ ನಾಟಕ ಮಂಡಳಿಯವರು ಆಡಿದ ನಾಟಕಗಳು ಗೋವಿಂದ ಪೈ ಅವರ ಮೇಲೆ ಬೀರಿದ ಪರಿಣಾಮವನ್ನು ವಿವರಿಸಿ.

**V. ಕೆಳಗಿನ ಕವಿ/ ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿ / ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **2x3=6**

28 ದುರ್ಗಸಿಂಹ
29. ಕುವೆಂಪು

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **1x3=3**

30. ಮೇದಿನಿಯಂ ಕ್ರಮಕ್ರಮದೆ ಪರ್ವಿದುದಾತ್ತನಭೋವಿಭಾಗಮಾ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿರಿ.** **1x3=3**

ಮಾರಿಗೌತಣವಾಯ್ತು ನಾಳಿನ ಭಾರತವು

**VIII. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ.** **1x3=3**

32. ತಾಳಿದವನು ಬಾಳಿಯಾನು

ಅಥವಾ

ಮನಸಿದ್ದರೆ ಮಾರ್ಗ.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **6x3=18**

33. "ಗುರೂಪದೇಶ ಎಂದರೆ ತಲೆ ನೆರೆಯದೆ ಬರುವ ಮುಪ್ಪು."
34. "ಮೊಗ್ಗುಗಳ ಬದಲು ಪೂರ್ಣ ಅರಳಿದ ಪುಷ್ಪಗಳು ನಮ್ಮ ಆದರ್ಶವಾಗಬೇಕು."
35. "ಧರ್ಮದ ಕೇಂದ್ರ ಈಶ್ವರನಲ್ಲಿದೆ."
36. "ಹೊಸ ಭರವಸೆಗಳ ಕಟ್ಟೋಣ."
37. "ಜೀವ ಸತ್ತು ಹೋಗುವುದು ಗೊತ್ತ"
38. "ನಿನ್ನಪದೆಸೆಯ ಬಯಸುವನಲ್ಲ"

**X. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ** **1x4=4**

ಅಂತೆಂಬನಾರ್ಗೆ ______________

______________________________

______________________

______________________ ನುಡಿದಂ

**ಅಥವಾ**

ಒಡವೆಯನರ್ಥಿಗಿತ್ತೆ ______________________

______________________________

______________________________

______________________ ಕುಂಭಸಂಭವಂ

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.** **1x4=4**

40 ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ
ಮಂಡಲ – ಗಿಂಡಲಗಳ ಗಡಮುಕ್ಕಿ
ತೇಲಿಸಿ ಮುಳುಗಿಸಿ ಖಂಡ ಖಂಡಗಳ
ಸಾರ್ವಭೌಮರ ನೆತ್ತಿಯ ಕುಕ್ಕಿ
ಹಕ್ಕಿ ಹಾರುತಿದೆ ನೋಡಿದಿರಾ !

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2x4=8**

41. ಲಂಡನ್ ನಗರ ವೀಕ್ಷಣೆಯಲ್ಲಿ ಲೇಖಕರು ಗುರುತಿಸಿರುವ ವಿಶೇಷತೆಗಳೇನು?

**ಅಥವಾ**

'ವೆಸ್ಟ್ ಮಿನ್‌ಸ್ಟರ್ ಅಬೆ' ಪ್ರಾರ್ಥನಾ ಮಂದಿರ ಒಂದು ವಿಶೇಷ ಸ್ಮಾರಕ ವಿವರಿಸಿ.

42. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು?

**ಅಥವಾ**

ಲವನ ನಡೆವಳಿಕೆ ಮೆಚ್ಚುಗೆಯಾಯಿತೇ? ಏಕೆ?

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 4=(2+2)**

ಪ್ರಕೃತಿ ಒಂದು ಅದ್ಭುತ ಸೃಷ್ಟಿ. ಪ್ರಕೃತಿಯಲ್ಲಿ ಕ್ರಿಮಿ, ಕೀಟ, ಪ್ರಾಣಿ, ಪಕ್ಷಿಗಳು ಒಂದು ಮಿತಿಯಲ್ಲಿದ್ದರೆ ಮಾತ್ರ ಪರಿಸರ ಸಮತೋಲನವಾಗಿರುತ್ತದೆ, ಇಲ್ಲದಿದ್ದರೆ ಪರಿಸರದಲ್ಲಿ ಅಸಮತೋಲನವುಂಟಾಗಿ ಜೀವರಾಶಿಗಳಿಗೆಲ್ಲ ಅಪಾಯ ಕಟ್ಟಿಟ್ಟದ್ದು. ಎಲ್ಲಾ ಪ್ರಾಣಿ ಪಕ್ಷಿಗಳು ತಮ್ಮ ಸಂತತಿ ವೃದ್ಧಿಸಿಕೊಳ್ಳಲು ಪ್ರಯತ್ನಿಸುತ್ತವೆ. ಜನಿಸಿದ ಎಲ್ಲಾ ಪ್ರಾಣಿ ಪಕ್ಷಿಗಳು ಉಳಿಯುವುದಿಲ್ಲ. ಪ್ರಾಣಿಗಳು ತಮ್ಮ ಬದುಕಿಗಾಗಿ ಇತರ ಪ್ರಾಣಿ ಪಕ್ಷಿಗಳೊಂದಿಗೆ ಹೋರಾಟ ನಡೆಸಿದಾಗ ಶಕ್ತಿಯುತವಾದವು ಉಳಿಯುತ್ತವೆ. ದುರ್ಬಲ ಪ್ರಾಣಿಗಳು ನಶಿಸಿ ಹೋಗುತ್ತವೆ. ಬದುಕುಳಿದ ಪ್ರಾಣಿ ಪಕ್ಷಿಗಳನ್ನು ಮಾನವ ದುರಾಸೆ, ಮೋಜು ಅಥವಾ ಹೊಟ್ಟೆಪಾಡಿಗಾಗಿ ನಾಶಮಾಡುತ್ತಿದ್ದಾನೆ. ಇದರಿಂದ ಪ್ರಾಣಿಗಳ ಸಂತತಿ ಕ್ಷೀಣವಾಗುತ್ತದೆ. ಪ್ರಾಣಿಗಳಂತೆ ಸಸ್ಯಗಳೂ ತಮ್ಮ ವಂಶ ಮುಂದುವರಿಯಬೇಕೆಂದು ಯತ್ನಿಸುವ ವರ್ಗಕ್ಕೆ ಸೇರಿವೆ. ಕೀಟ, ವಾಯು, ನೀರು ಮೊದಲಾದವುಗಳ ಮೂಲಕ ಬೀಜಗಳನ್ನು ವಿತರಣೆ ಮಾಡುತ್ತವೆ. ಈ ಬೀಜಗಳು ಎಲ್ಲ ಭೂಜಲ–ಪ್ರದೇಶದಲ್ಲಿ ಹರಡಿಕೊಂಡರೂ ಅವು ತಮಗೆ ಅನುಕೂಲವಾದ ವಾತಾವರಣ ದೊರೆತಾಗ ಮೊಳೆಕೆಯೊಡೆದು ವಂಶಗಳ ಬೆಳವಣಿಗೆಗೆ ಕಾರಣವಾಗುತ್ತವೆ. ವಿಪುಲವಾದ ನೀರು, ಆರ್ದ್ರತೆ ಇರುವಲ್ಲಿ ದಟ್ಟವಾದ ಕಾಡು ಬೆಳೆದರೆ, ಬಯಲು ಪ್ರದೇಶದಲ್ಲಿ ಜಾಲಿ ಗಿಡಗಳೇ ವೃಕ್ಷರಾಜ

ಎನಿಸಿಕೊಳ್ಳುವುವು. ಇವೇ ಬೀಜಗಳು ಮರುಭೂಮಿ, ರಸ್ತೆ, ಕಟ್ಟಡಗಳ ಮೇಲೆ ಬಿದ್ದರೆ ಅವುಗಳ ಬೆಳವಣಿಗೆಗೆ ಅವಕಾಶವೇ ದೊರೆಯುವುದಿಲ್ಲವಾದ್ದರಿಂದ ನಾಶವಾಗುವುವು.

**ಪ್ರಶ್ನೆಗಳು :**

43. ಅ) ಸಸ್ಯಗಳು ತಮ್ಮ ವಂಶವನ್ನು ಹೇಗೆ ಬೆಳೆಸುತ್ತವೆ ?
ಆ) ಪ್ರಾಣಿಗಳ ಸಂತತಿ ಕ್ಷೀಣಿಸಲು ಕಾರಣಗಳಾವುವು ?

**XIV. ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x5=5**

44. ನಿಮ್ಮನ್ನು ಚಿಕ್ಕಮಗಳೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ವಸಂತ ಎಂದು ಭಾವಿಸಿಕೊಂಡು ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ಕುರಿತು ಚಿಕ್ಕಬಳ್ಳಾಪುರದಲ್ಲಿರುವ ನಿಮ್ಮ ತಾಯಿ ವರುಣರವರಿಗೆ ಒಂದು ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಮೈಸೂರಿನ ಶಾರದಾವಿಲಾಸ ಪ್ರೌಢಶಾಲೆಯಲ್ಲಿ ಓದುತ್ತಿರುವ ಭಾನು ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆಯುವ ಕ್ರೀಡಾಕೂಟದ ಉದ್ಘಾಟಕರಾಗಿ ಬರುವಂತೆ ಆಹ್ವಾನಿಸಿ ನಿಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1x5=5**

45. ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಯಲ್ಲಿ ಸಾಮಾಜಿಕ ಜಾಲತಾಣಗಳ ಮಹತ್ವ

**ಅಥವಾ**

ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ